ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ ಇತ್ಯಾದಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವ ಅಂಗೀಕಾರ

ಪ್ರೊ॥ ಎ. ಲಕ್ಷ್ಮೀಸಾಗರ್... (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆಯ ಸಚಿವರು).—ಮಾನ್ಯ ಅಧ್ಯಕ್ಷರೇ, "ರ್ಗರ್ಲನೇ ಇಸವಿಯ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ಪ್ರತಿಬಂಧ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು. ಪ್ರಸ್ತಾವ ಏನೆಂದರೆ: 'ರ್ಗರ್ಲನೇಯ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ಪ್ರತಿಬಂಧ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಡನೆಗೆ ಒಪ್ಪಿಗೆ ನೀಡಲಾಯಿತು

ಎ. ಪಿ. ಎಂ. ಸಿ. ಗೆ ನಡೆಯಲಿರುವ ಚುನಾವಣೆಗಳನ್ನು ಮುಂದೂಡುವ ಬಗ್ಗೆ

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರೇ, ತಾವು ಮುಂದಿನ ಬಿಲ್‌ನ್ನು ತೆಗೆದುಕೊಳ್ಳುವುದಕ್ಕಿಂತ ಮೊದಲು ಎ. ಪಿ. ಎಂ. ಸಿ. ಎಲೆಕ್ಷನ್ ಸಂಬಂಧದಲ್ಲಿ ಕರ್ನಾಟಕ ರಾಜ್ಯಾದಂತ ಈ ತಿಂಗಳ ಕೊನೆಯಾಳಗಾಗಿ ಅಂದರೆ ದಿನಾಂಕ ೨೮, ೨೯, ೩೦ರೊಳಗೆ ನಾಮಿನೇಷನ್ ಪೇಪರ್ ಫೈಲ್ ಮಾಡಬೇಕಾಗಿದೆ. ಆ ವಿಚಾರದಲ್ಲಿ ಚುನಾವಣೆಯನ್ನು ಮುಂದಕ್ಕೆ ಹಾಕತಕ್ಕಂಥಹದರ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಶ್ರೀ ಮಾನ್ ರಾಚಯ್ಯನವರು ನೋಟಿಫಿಕೇಶನ್ ಓದಿದರೆಂದು ಡೆಕ್ಕನ್ ಹೆರಾಲ್ಡ್‌ನಲ್ಲಿ ಹಾಗೂ ಇತರೇ ಪತ್ರಿಕೆಗಳಲ್ಲಿ ಬಂದಿದೆ. ಆ ಸದನದಲ್ಲಿ ನೋಟಿಫಿಕೇಶನ್ ಇಶ್ಯೂ ಮಾಡಿದ್ದಾರೆ. when the House is in session. ತಕ್ಷಣ ಇಲ್ಲೂ ಕೂಡ ಅದನ್ನು ಹೇಳಬೇಕಾಗುತ್ತದೆ. Otherwise it amounts to breach of privilege of this House. ಇವೊತ್ತು ಈ ಬಗ್ಗೆ ನಾವು ಪ್ರಿವಿಲೇಜ್ ಇಶ್ಯೂ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಮಾತನಾಡುತ್ತಿಲ್ಲ. ಆದರೆ ಸದನದ ಗೌರವದ ದೃಷ್ಟಿಯಿಂದ ಮಾನ್ಯ ಸದಸ್ಯರಿಗೆ ಈ ವಿಚಾರ ಗೊತ್ತಾಗಬೇಕು ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಈ ಬಗ್ಗೆ ಸರ್ಕಾರದ ತೀರ್ಮಾನ ಏನಿದೆ ಎಂಬುದು ನಮಗೆ ಗೊತ್ತಾಗಬೇಕು. ನೀವು ಎ ಪಿ ಎಂ ಸಿ ಎಲೆಕ್ಷನ್ಸ್ ಮುಂದಕ್ಕೆ ಹಾಕಿರುವ ವಿಚಾರದಲ್ಲಿ...

ಅಧ್ಯಕ್ಷರು. ಮುಂದೆ ಹಾಕಲಿಲ್ಲ....

ಶ್ರೀ ಎಸ್ ಬಂಗಾರಪ್ಪ.—ಮುಂದೆ ಹಾಕಿದ್ದಾರೆ. ಇಲ್ಲಿ ಕುಳಿತುಕೊಂಡು...

ಅಧ್ಯಕ್ಷರು.—ತಾವು ಹೇಳುವುದು ಕರೆಕ್ಟ್ ಇದೆ. ನಾನು ಕೇಳುತ್ತೇನೆ.

Sri S. BANGARAPPA.—The Hon'ble Minister has read out a notification alleged to have been issued by the Government. Why not in this House ?

ಅಧ್ಯಕ್ಷರು. ಆ ಹೌಸ್‌ನಲ್ಲಿ ಎ. ಪಿ. ಎಂ. ಸಿ. ಎಲೆಕ್ಷನ್ ಮುಂದಕ್ಕೆ ಹಾಕಿದ್ದೇವೆಂದು ನೋಟಿಫಿಕೇಷನ್ ಓದಿದರು, ಅದನ್ನು ಇಲ್ಲಿ ಯಾರೂ ಹೇಳಲಿಲ್ಲ ಎಂದು ಅವರು ಹೇಳುತ್ತಿರುವುದು...

ಪ್ರೊ॥ ಎ. ಲಕ್ಷ್ಮೀಸಾಗರ್.—ಮೇಲ್ಮನೆಯಲ್ಲಿ ಪ್ರಕಟವಾಗಿದ್ದರೆ ವಿಷಯವನ್ನು ಇಲ್ಲೂ ಪ್ರಕಟ ಮಾಡಬೇಕಾಗುತ್ತದೆ. ಅದನ್ನು ವಿಚಾರಿಸಬೇಕು.

ಅಧ್ಯಕ್ಷರು.—ಅಲಕ್ಷ್ಯ ಮಾಡಬೇಡಿ ಎಂದು ಹೇಳುತ್ತಾರೆ,

ಶ್ರೀ ಎಸ್. ಬಂಗಾರಪ್ಪ.—ಅಲಕ್ಷ್ಯ ಅಲ್ಲ, ಸದನದ ಘನತೆ ಗೌರವದ ಪ್ರಶ್ನೆ.

ಪ್ರೊ॥ ಎ. ಲಕ್ಷ್ಮೀಸಾಗರ್. ಇಲ್ಲ ಆ ತರಹ ಇಲ್ಲ...

ಶ್ರೀ ಎಸ್. ಬಂಗಾರಪ್ಪ.—ಮನಸ್ಸಿಗೆ ಬಂದ ಹಾಗೆ ಮಾಡುತ್ತಿದ್ದೀರಾ...

ಪ್ರೊ॥ ಎ. ಲಕ್ಷ್ಮೀಸಾಗರ್. ಅದನ್ನು ವಿಚಾರಿಸಿ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ. ಮರ್ಯಾದೆಯನ್ನು ಕಳೆಯುತ್ತಿದ್ದೀರಾ ಹೇಗೆ...

ಪ್ರೊ॥ ಎ. ಲಕ್ಷ್ಮೀಸಾಗರ್. ಮರ್ಯಾದೆ ಪ್ರಶ್ನೆ ಅಲ್ಲ.

ಶ್ರೀ ಜೆ. ಹೆಚ್. ಪಟೇಲ್. ಅಪ್ಪರ್ ಹೌಸ್‌ನಲ್ಲಿ ಯಾವ ನೋಟಿಫಿಕೇಶನ್ ಓದಲಾಗಿದೆ, ಅದನ್ನು ಇಲ್ಲಿ ಇಡಲೇಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ವಿಧಾನ ಸಭೆಗೆ ಕೊಡಬೇಕಾದ ಗೌರವದ ಬಗ್ಗೆ...

ಶ್ರೀ ಜೆ. ಹೆಚ್. ಪಟೇಲ್. ಮೇಲ್ಮನೆಯಲ್ಲಿ ಯಾವ ನೋಟಿಫಿಕೇಶನ್ ಇಡಲಾಗಿದೆಯೋ ಅದನ್ನು ಇಲ್ಲಿ ಇಡಲೇ ಬೇಕಾಗುತ್ತದೆ. ಇಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ. ಪಟೇಲರವರೇ, ತಪ್ಪು ಅನುಭವದಲ್ಲಿ ಇದೆ ಎಂದು ಭಾವಿಸುತ್ತೇನೆ.

ಅಧ್ಯಕ್ಷರು. ಸೈಮಲ್ಟೇನಿಯಸ್ ಆಗಿ ಇಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ. ಹೌದು.

ಪ್ರೊ॥ ಎ ಲಕ್ಷ್ಮೀಸಾಗರ್. ನೇರವಾದ ವಿಚಾರ ತಿಳಿದಿಲ್ಲ. ತಿಳಿದುಕೊಂಡು ಅದರ ಬಗ್ಗೆ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ. ಯಾವಾಗ ಹೇಳುತ್ತೀರಿ...

ಪ್ರೊ॥ ಎ ಲಕ್ಷ್ಮೀಸಾಗರ್.—ತಿಳಿದು ಹೇಳುತ್ತೇನೆಂದು ಹೇಳಿದ್ದೇನೆ.

ಅಲ್ಲಿ ಇಟ್ಟ ಮೇಲೆ ಇಲ್ಲಿ ಇಡಲೇ ಬೇಕಾಗುತ್ತದೆ.

ಅಧ್ಯಕ್ಷರು. ಅವರು ವಿಚಾರಿಸಿ ಹೇಳುತ್ತೇನೆಂದು ಹೇಳಿದ್ದಾರಲ್ಲ...

ಶ್ರೀ ಎಸ್, ಬಂಗಾರಪ್ಪ.—ನಾನು ಕೇಳುವುದು ಇಷ್ಟು. ನೀವು ಉತ್ತರ ಕೊಡತಕ್ಕಂಥ ಥಾಟಿ ಎನಿದೆ ಅದು ಒಳ್ಳೆಯದಲ್ಲ! ನಾಳೆ ೩೦ನೇ ತಾರೀಖಿಗೆ ಕೆಲವು ತಾಲ್ಲೂಕುಗಳಲ್ಲಿ ಚುನಾವಣೆ ನಡೆಯಬೇಕಾಗಿರುವುದು ಲಾಸ್ಟ್ ಡೇಟ್ ಇದೆ. ಈ ತಾರೀಖಿನ್ನು ಮಾನ್ಯ ಸಚಿವರು ಗಮನಕ್ಕೆ ಏಕೆ ತೆಗೆದು ಕೊಳ್ಳುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್,—ಏನು ಮಹಾ ದೊಡ್ಡದು.

ಪ್ರೊ॥ ಎ. ಲಕ್ಷ್ಮೀಸಾಗರ್,—ಕಾಲು ಗಂಟೆ ನನಗೆ ಸಮಯ ಕೊಡಿ.

ಶ್ರೀ ಎಸ್, ಬಂಗಾರಪ್ಪ.—ಅದನ್ನೇ ಅವರು ದೊಡ್ಡದಾಗಿ ಮಾಡುತ್ತಾ ಇದ್ದಾರೆ. ಹೇಳುತ್ತೇನೆ ಹೇಳುತ್ತೇನೆ ಅಂದರೆ ಯಾವಾಗ ?

ಪ್ರೊ॥ ಎ. ಲಕ್ಷ್ಮೀಸಾಗರ್.—ಕಾಲುಗಂಟೆ ಸಮಯದಲ್ಲಿ ಹೇಳುತ್ತೇನೆಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಕಾಲು ಗಂಟೆ, ಅರ್ಧಗಂಟೆ ಎಂದು ಹೇಳುತ್ತೀರಿ, ಆದರೆ ಮೊದಲು ಹೇಳುವುದಿಲ್ಲ. ಮಾನ್ಯ ಅಧ್ಯಕ್ಷರೆ, ಮತ್ತೊಂದು ವಿಚಾರ ಇದೆ. ಈಗ ಅಜೆಂಡ ಪ್ರಕಾರ ಸಭೆಯ ಮುಂದೆ ತೆಗೆದುಕೊಳ್ಳಬೇಕಾದ ಕೆಲವು ಬಿಲ್ಸ್ ಇವೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಆದ ಪ್ರಕಾರ ಅಂದರೆ ಅರ್ಡಿನೆನ್ಸ್ ರೀಪ್ಲೇಸಿಂಗ್ ಬಿಲ್ಸ್ ಏನಿವೆ ಅವನ್ನು ಮಾತ್ರ ತೆಗೆದುಕೊಳ್ಳಬೇಕು ಎಂದು ತಮ್ಮ ಅಧ್ಯಕ್ಷತೆಯಲ್ಲಿ, ತಮ್ಮ ಸಮ್ಮುಖದಲ್ಲಿ ಸಭೆ ನಡೆವಾಗ ತೀರ್ಮಾನವಾಗಿರತಕ್ಕ ವಿಚಾರ. ಆದರೆ ಇವತ್ತು ಏನಾಗಿದೆಯೆಂದರೆ, ಇದರಲ್ಲಿ ಮತ್ತೆ ಎರಡು ಬಿಲ್‌ಗಳನ್ನು ಸೇರಿಸಿರತಕ್ಕದ್ದನ್ನು ನಾವು

ನೋಡುತ್ತಾ ಇದ್ದೇವೆ. ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಅಮೆಂಡ್‌ಮೆಂಟ್ ಬಿಲ್ ೧೯೮೪ ಮತ್ತು ಕರ್ನಾಟಕ ಲ್ಯಾಂಡ್ ರಿಫಾರ್ಮ್ಸ್ ಅಮೆಂಡ್‌ಮೆಂಟ್ ಬಿಲ್ ೧೯೮೪ ಎಂಬುವು ಸೇರಿವೆ, ನನಗೆ ಗೊತ್ತಿರುವಹಾಗೆ ಯಾವುದೇ ಸುಗ್ರೀವಾಜ್ಞೆಗೆ ಸಂಬಂಧಪಟ್ಟಿರತಕ್ಕ ಬಿಲ್‌ಗಳು ಇವಲ್ಲ. ಇದರ ಬಗ್ಗೆ ಇಲ್ಲಿ ಮಾತನಾಡಲು ಪೂರ್ವಭಾವಿಯಾಗಿ ಸಿದ್ಧತೆ ಮಾಡಿಕೊಂಡು ಬರುವುದಕ್ಕೆ ಮಾನ್ಯ ಸದಸ್ಯರಿಗೂ ಕೂಡ ಸಾಧ್ಯವಾಗಿಲ್ಲ. ಈರೀತಿ ಇವತ್ತು ಏಕಾಏಕಿ ತೆಗೆದುಕೊಂಡು ಬಂದು ಅಜೆಂಡಾದಲ್ಲಿ ಹಾಕಿ ಎರಡು ಬಿಲ್‌ಗಳನ್ನು ಪಾಸ್ ಮಾಡಿಕೊಡಬೇಕು ಅಂದರೆ ಇದು ಸಾಧುವಲ್ಲ. ಆದ್ದರಿಂದ ಆರ್ಡಿನೆನ್ಸ್‌ಗೆ ಸಂಬಂಧಪಟ್ಟಿರತಕ್ಕ ಬಿಲ್‌ಗಳು ಯಾವುದಾದರೂ ಇದ್ದರೆ ತೆಗೆದುಕೊಂಡು ಬನ್ನಿ. ಚರ್ಚೆ ಮಾಡೋಣ.

ಪ್ರೊ॥ ಎ. ಲಕ್ಷ್ಮೀಸಾಗರ್. —ಒಂದು ನಿಮಿಷ.

ಶ್ರೀ ಎಸ್. ಬಂಗಾರಪ್ಪ.—ಆರ್ಡಿನೆನ್ಸ್‌ಗೆ ಸಂಬಂಧಪಟ್ಟ ಬಿಲ್‌ಗಳನ್ನು ತೆಗೆದುಕೊಂಡು ಬನ್ನಿ ನಾವು ಪಾಸ್ ಮಾಡಿಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ತಿಳಿಸಿದ್ದೇವೆ. ಆರ್ಡಿನೆನ್ಸ್‌ಗೆ ಸಂಬಂಧ ಪಡದೇ ಇರತಕ್ಕಂಥ ಬಿಲ್‌ಗಳನ್ನು ತೆಗೆದುಕೊಂಡುಬಂದು ಇದರಲ್ಲಿ ಹಾಕಿಬಿಟ್ಟರೆ ಮಾನ್ಯ ಸದಸ್ಯರಿಗೆ ಆಕ್ಟ್‌ಗೆ ಸೆಕ್ಷನ್ಸ್ ಹುಡುಕುವುದು ತೊಂದರೆಯಾಗಿ ಪರದಾಟವಾಗುತ್ತದೆ. ಆದ್ದರಿಂದ ದಯವಿಟ್ಟು...

ಶ್ರೀ ಜೆ.ಹೆಚ್. ಪಟೇಲ್ —ಬಹಳ ಆಧ್ಯಯನ ಮಾಡುವಂಥ ವಿಷಯಗಳು ಮುಖ್ಯವಾಗಿ ಈ ಲ್ಯಾಂಡ್ ರಿಫಾರ್ಮ್ಸ್ ಬಿಲ್‌ನಲ್ಲಿಲ್ಲ. ಎರಡು ಜನ ಟ್ರಿಬ್ಯುನಲ್ ಮೆಂಬರ್ಸ್ ಪೈಕಿ ಒಬ್ಬರು ಅಬ್ಸೆಂಟ್ ಆದರೆ ಟ್ರಿಬ್ಯುನಲ್ ಡಿಫಂಕ್ಟ್ ಆಗುತ್ತದೆ, ಕೆಲಸಮಾಡುತ್ತಾ ಇಲ್ಲ, ಆದಕ್ಕೋಸ್ಕರ ಒಬ್ಬರೇ ಇದ್ದಾಗಲೂ ಕೂಡ ಕೆಲಸ ಮಾಡುವುದಕ್ಕೆ ಅಧಿಕಾರ ಕೊಡುವುದು ಇದರ ಉದ್ದೇಶವಾಗಿದೆ.

ಶ್ರೀ ಎಸ್. ಬಂಗಾರಪ್ಪ. - ನಾನು ನೋಡಿದ್ದೇನೆ,

ಪ್ರೊ॥ ಎ. ಲಕ್ಷ್ಮೀಸಾಗರ್. —ಹಾಗಲ್ಲ, ಒಂದು ನಿಮಿಷ ತಾವು ಕುಳಿತುಕೊಂಡರೆ ಹೇಳುತ್ತೇನೆ. ಏಕಾಏಕಿ ಇದನ್ನು ನಾವು ತಂದಿಲ್ಲ. ಇದನ್ನು ಇಂಟರ್‌ಡ್ಯೂಸ್‌ಮಾಡಿ ಬಹುಶಃ ಒಂದು ವಾರ ಆಗಿದೆ, ನಾನು ಬೆಳಿಗ್ಗೆ ಹೇಳಿದ್ದುಂಟು ಆರ್ಡಿನೆನ್ಸ್ ರಿಪ್ಲೇಸಿಂಗ್ ಬಿಲ್ಸ್ ಇದೆ, ಅದಕ್ಕೆ ಅದ್ಯತೆ ಕೊಡಬೇಕು ಎಂದು ಹೇಳಿದ್ದುಂಟು, ಇಲ್ಲ ಎಂದು ನಾನು ಹೇಳಲಿಲ್ಲ. ಆದರೆ ಇಗಿರತಕ್ಕ ಎರಡು ತಿದುಪಡಿ ಮಸೂದೆಗಳಲ್ಲಿ ಒಂದು ಹೆಚ್‌ಯುಡಿಗೆ ಸಂಬಂಧಪಟ್ಟಿದ್ದು, ಇನ್ನೊಂದು ರೆವಿನ್ಯು ಇಲಾಖೆಗೆ ಸಂಬಂಧ ಪಟ್ಟಿದ್ದು, ಇದು ಅತ್ಯವಶ್ಯಕವಾಗಿ ಈಗಲೇ ಆಗಬೇಕಾಗಿರತಕ್ಕಂಥಾದು. ಇದಕ್ಕೆ ಕಾರಣ ಹೇಳುತ್ತೇನೆ. ಇಬ್ಬರು ಸದಸ್ಯರು ಇರತಕ್ಕಂಥ ಆಪಲೆಟ್ ಟ್ರಿಬ್ಯುನಲ್‌ನಲ್ಲಿ ಒಬ್ಬರು ಕಾರಣಾಂತರದಿಂದ ಗೈರು ಹಾಜರಾದರೆ ಅವರು ಇಂಟರಿಂ ಆರ್ಡರ್ ಪಾಸ್ ಮಾಡುವುದಕ್ಕಾಗುವುದಿಲ್ಲ! ಅಪೀಲ್ ಡಿಸ್ಮಿಸ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ, ಸ್ಟೇ ಕೇಳಿದರೆ ಕೊಡುವುದಕ್ಕಾಗುವುದಿಲ್ಲ! ಕಾನೂನು ರೀತ್ಯ ಇತರೆ ಆರ್ಡರನ್ನು ಪಾಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇಬ್ಬರು ಸದಸ್ಯರು ಸೇರಿ ಮಾಡಬೇಕು ಎಂದು ಕಾನೂನು ಇದೆ. ಈ ತಿದ್ದುಪಡಿ ಏನೆಂದರೆ, ಇಂತಹ ಇಂಟರಿಂ ಆರ್ಡರ್ಸ್, ಪಾಸ್ ಮಾಡುವುದಕ್ಕೆ ಸ್ಟೇ ಕೊಡುವುದಕ್ಕೆ ಒಬ್ಬರು ಸದಸ್ಯರು ಇದ್ದರೂ ಮಾಡಬಹುದು ಆಪೀಲ್ ಹಿಯರಿಂಗ್‌ಗೆ ಇಬ್ಬರು ಇರಬೇಕು ಏನ್ನುವುದು. ಇದು ತಕ್ಷಣ ಪಾಸ್ ಆಗುವ ಆವಶ್ಯಕತೆ ಇದೆ. ಇಲ್ಲದೇ ಹೋದರೆ ಅನೇಕ ಕಡೆ ಕಕ್ಷಿಗಾರರಿಗೆ ತೊಂದರೆಯಾಗುತ್ತದೆ. ಅನ್ಯಾಯವಾಗತಕ್ಕ ಸಂಭವವೂ ಕೂಡ ಇದೆ. ಇವತ್ತು ಇದು ಬೇಡ, ಈಗ ಸಮಯ ಇಲ್ಲ ಎಂದು ತಾವು ಹೇಳಿದರೆ ಅಲ್ಲಿಗೆ ನಿಲ್ಲಿಸುತ್ತೇವೆ, ನನ್ನದೇನೂ ಅಭ್ಯಂತರವಿಲ್ಲ,

ಶ್ರೀ ಎಸ್. ಬಂಗಾರಪ್ಪ.—ಈಗ ನಾನು ಈ ಮಸೂದೆಗೆ ಸಂಬಂಧಪಟ್ಟಿರತಕ್ಕಂಥ ವಿವರಗಳಿಗೆ ನಾನು ಹೋಗುವುದಿಲ್ಲ. ಏಕೆಂದರೆ ಸೆಕ್ಷನ್ ೧೧ಟಿಬಿ ಅದೊಂದೇ ಓದಿದರೆ ಆಗುವುದಿಲ್ಲ. ಈ ಬಿಲ್ ಚರ್ಚೆಗೆ ಬಂದಾಗ ನಾನು ಹೇಳುತ್ತೇನೆ. ಏಕೆಂದರೆ, ಯಾವ ಯಾವ ವಿಚಾರದ ಬಗ್ಗೆ ಏಕ ಸದಸ್ಯರು ಸದಸ್ಯರು ಆಪಲೆಟ್ ಅಥಾರಿಟಿಯಾಗಿ ಕುಳಿತುಕೊಂಡಾಗ ಏನೇನು ಮಾಡಬಹುದು ಎನ್ನತಕ್ಕಂಥ ವಿಚಾರ ಬಂದಾಗ, regarding admission of appeal, admission of appeal if presented after the expiry date, granting stay orders etc.,

Any matter of an interlocutory character in the appeals or other proceedings; and lastly such other matters and subject to

such conditions as may be prescribed.'' ಇದರ ವ್ಯಾಖ್ಯಾನ ಬಹಳ ದೂರ ಹೋಗತಕ್ಕದ್ದಾಗಿದೆ. ನಾನು ಒಪ್ಪುವುದಿಲ್ಲ.

ಪ್ರೊ॥ ಎ. ಲಕ್ಷ್ಮೀಸಾಗರ್.—ಇಷ್ಟು ಹೊತ್ತಿಗೆ ಪಾಸ್ ಆಗಿಹೋಗಿಬಿಡುತ್ತಿತ್ತು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಇದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಪ್ರೊ॥ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಬೇಡ ಅಂದರೆ, ಬೇಡ ಎಂದು ನಾನು ಆಗಲೇ ಹೇಳಿಬಿಟ್ಟಿದ್ದೇನೆ.

ಅಧ್ಯಕ್ಷರು.—ಬಂಗಾರಪ್ಪನವರೇ, ಇದರಿಂದ ತೊಂದರೆ ಏನಾಗುತ್ತದೆ ನೋಡಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಇದರ ಬಗ್ಗೆ ನಾವು ಸ್ಪಡಿ ಮಾಡಬೇಕಾಗುತ್ತದೆ.

ಶ್ರೀ ಜೆ.ಹೆಚ್.ಪಟೇಲ್.—ಅಧ್ಯಕ್ಷರೆ, ಇದರ ಬಗ್ಗೆ ಬಹಳ ಅಧ್ಯಯನ ಮಾಡುವಂಥ ಅವಶ್ಯಕತೆ ಇಲ್ಲ.

ಅಧ್ಯಕ್ಷರು.—ಎಲ್ಲರಿಗೂ ಅವಶ್ಯಕತೆ ಇದೆ. ಬಹಳ ಜನರಿಗೆ ತೊಂದರೆಯಾಗುತ್ತದೆ. ಆ ಕಡೆ, ಈ ಕಡೆ ಅಲ್ಲ, ಇಡೀ ರಾಜ್ಯದ ಜನರಿಗೆ...

ಶ್ರೀ ಜೆ.ಹೆಚ್. ಪಟೇಲ್.—ಅಧ್ಯಕ್ಷರೆ, ಬಹಳ ಜನರಿಗೆ ತೊಂದರೆಯಾಗುತ್ತದೆ. ಡಿಲೇ ಓವರ್ ಕಮ್ ಮಾಡಲಿಕ್ಕೆ ಒಂದೇ ಉದ್ದೇಶ. ಡಿಲೇ ಆಗಬಾರದೆಂದು ಒಂದೇ ಉದ್ದೇಶದಿಂದ ಹೇಳಿದ್ದು ದು.

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಏನಾಗಿದೆ, ಜ್ಯುಡಿಷಿಯಲ್‌ನಿಂದ ಬಂದಿರತಕ್ಕವರು ಒಬ್ಬರು, ಇನ್ನೊಬ್ಬರು ರೆವಿನ್ಯೂನಿಂದ ಬಂದಿರತಕ್ಕವರೋ ಅಥವಾ ಕೆ.ಎ.ಎಸ್. ಇರುತ್ತಾರೆ.

ಶ್ರೀ ಜೆ.ಹೆಚ್.ಪಟೇಲ್.—ಶಿವಮೊಗ್ಗಕ್ಕೆ ಒಬ್ಬರು ಆಫೀಸರ್ ಪೋಸ್ಟಿಂಗ್‌ಮಾಡಿ ಸುಮಾರು ಮೂರು ನಾಲ್ಕು ತಿಂಗಳಾಯಿತು. ಅಲ್ಲಿ ಒಂದು ಪಿಟೀಷನ್ ಸಹ ಮುಂದೆ ಹೋಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೊಸ್ಕರವೇ ಹೈಕೋರ್ಟ್‌ನಲ್ಲಿ ರಿಟ್ ಹಾಕುವುದು ನಡೆದಿದೆ. ಈಗ ಅಲ್ಲಿ ತಲೆನೋವಾಗಿದೆ.

ಅಧ್ಯಕ್ಷರು.—ನಾವು ಬಿಲ್ ಮೇಲೆ ಮಾತನಾಡಿ, ಎಲ್ಲರಿಗೂ ಇದರ ಅವಶ್ಯಕತೆ ಇದೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ನನ್ನಪ್ರಕಾರ ಈ ಅಪೆಲೆಟ್ ಕೋರ್ಟ್ ಮಾಡಿರುವುದೇ ಅಪರಾಧ ಎಂದು ನಾನು ಹಿಂದೆ ಹೇಳಿದ್ದೇನೆ. ಈಗ ನಾವು ಕಾದಾಯ ಮಂತ್ರಿಗಳಾಗಿದ್ದೀರಿ, ಎಷ್ಟು ಅಪೆಲೆಟ್ ಕೋರ್ಟ್‌ಗಳು ಜಡ್ಜ್‌ಮೆಂಟ್ ಬರೆದಿದ್ದಾರೆ ಎಂಬ ಲೆಕ್ಕ ತೆಗೆದುಕೊಳ್ಳಿ. ಅಪೆಲೆಟ್ ಕೋರ್ಟ್‌ಗಳು ಸಹಾಯ ಮಾಡುತ್ತಿವೆ ಎನ್ನುವ ವಿಚಾರ ಬೇಡ. ಎಂಟೈರ್ ಅಪೆಲೆಟ್ ಕೋರ್ಟ್‌ಗಳನ್ನು ಅಬಾಲಿಷ್ ಮಾಡಬೇಕೆಂದು ನಾನು ಹಿಂದೆ ಹೇಳಿದ್ದೇನೆ. ಈಗ ೧೯ ಜಿಲ್ಲೆಗಳಲ್ಲಿ ಏನಾಗಿದೆ ತಾವು ವಿಚಾರ ಮಾಡಿ ನೋಡಿ ! ಆಗ ತಮಗೆ ಗೊತ್ತಾಗುತ್ತದೆ. ಇದು ಸಣ್ಣ ವಿಚಾರ ಅಲ್ಲ. ಈಗ ಅಪೆಲೆಟ್ ಕೋರ್ಟ್‌ಗಳನ್ನು ತೆಗೆಯಬೇಕು ; ತೆಗೆಯದೇ ಇದ್ದರೆ ಗೇಣಿದಾರರು ಉಳಿಯುವುದಿಲ್ಲ ಎನ್ನುವ ವಿಚಾರವನ್ನು ತಮ್ಮ ಮುಂದೆ ಇಡಬೇಕಾಗುತ್ತದೆ. ಆದ್ದರಿಂದ, ಇವೊತ್ತು ಇದು ನನ್ನ ಪ್ರಕಾರ ಬೇಡ.

ಅಧ್ಯಕ್ಷರು.—ಸ್ವಲ್ಪ ದಯಮಾಡಿ ಕುಳಿತುಕೊಳ್ಳಿರಿ ; ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಹೇಳಲಿ. ಅವರು ಮೂವ್ ಮಾಡಲಿ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಇದನ್ನು ಮೂವ್ ಮಾಡುವುದು ಬೇಡ ಎಂದು ನನ್ನ ಅಭಿಪ್ರಾಯ

ಅಧ್ಯಕ್ಷರು.—ತಾವು ಸ್ವಲ್ಪ ವಿಚಾರ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಈ ಸಿಟ್ಟಿಂಗ್‌ನಲ್ಲಿ ತೆಗೆದುಕೊಳ್ಳುವುದು ಬೇಡ ಎಂದು ಹೇಳುವುದಿಲ್ಲ.

ಅಧ್ಯಕ್ಷರು.—ಈಗ ಅವರು ಮೂವ್ ಮಾಡಲಿ ಇದನ್ನು ನಾಳೆ ತೆಗೆದುಕೊಳ್ಳೋಣವೆ ಅಥವಾ ನಾಡಿದ್ದು ತೆಗೆದುಕೊಳ್ಳೋಣವೇ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಅದು ಈಗ ಬೇಡ,

ಪರ್ಯಾಲೋಚನಾ ಪ್ರಸ್ತಾವ

(ii) ೧೯೮೬ನೇ ಇಸವಿಯ ಕರ್ನಾಟಕನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ವಿಧೇಯಕ

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೆ, ೧೯೮೬ನೇ ಇಸವಿಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು,—ಪ್ರಸ್ತಾವನ್ನು ಮಂಡಿಸಲಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ.—ಅಧ್ಯಕ್ಷರೆ, ಈಗಾಗಲೇ ಈ ಬಿಲ್ಲು ೧೯ನೇ ತಾರೀಖೇ ಇಂಟ್ರಡ್ಯೂಸ್ ಆಗಿದೆ. ಇದು ಏನಾಗಿದೆ ಎಂದರೆ ಟೌನ್ ಪ್ಲಾನಿಂಗ್ ಅಥಾರಿಟೀಸ್‌ನವರು ರೆಸಲ್ಯೂಷನ್ ಮಾಡಿ ಸಿ.ಡಿ.ಪಿ ; ಒ.ಡಿ.ಪಿ.ಮಾಡಿ ಲ್ಯಾಂಡ್‌ನ್ನು ಛೇಂಜ್ ಮಾಡಿ ಎಂದು ಸರ್ಕಾರಕ್ಕೆ ಕಳುಹಿಸುತ್ತಿದ್ದಾರೆ. ಆದರೆ ಈ ಪ್ರೊಸೀಜರ್ ಸರಿಯಲ್ಲ. ಮಹಾರಾಷ್ಟ್ರ, ತಮಿಳ್ನಾಡು, ಗುಜರಾತ್, ಆಂಧ್ರ ಪ್ರದೇಶದವರು ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡಿಕೊಂಡು ಛೇಂಜ್ ಆಫ್ ಲ್ಯಾಂಡ್ ಯೂಸ್ ಮಾಡಬೇಕಾದರೆ ಒಂದು ಪ್ರೊಸೀಜರ್‌ನ್ನು ಮಾಡಿಕೊಂಡಿದ್ದಾರೆ. ಅದರ ಪ್ರಕಾರ ಅದನ್ನು ಸಾರ್ವಜನಿಕರ ಗಮನಕ್ಕೆ ತರಬೇಕು ; ಹೆಚ್ಚು ಪ್ರಸಾರವುಳ್ಳ ದಿನಪತ್ರಿಕೆಗಳಲ್ಲಿ ಪಬ್ಲಿಷ್ ಮಾಡಬೇಕು ಸಾರ್ವಜನಿಕರಿಂದ ಏನಾದರೂ ತಕರಾರು ಇದ್ದಲ್ಲಿ ಅದನ್ನು ಕೇಳಬೇಕು, ಇನ್ನೂ ಮುಂತಾದ್ದೆಲ್ಲಾ ಅಲ್ಲಿ ಇದೆ. ಆದರೆ ಈಗ ನಾವು ಅದನ್ನೆಲ್ಲಾ ಮಾಡುತ್ತಿಲ್ಲ. ಈ ಪ್ರೊಸೀಜರ್‌ನ್ನು ಸ್ಟ್ರೀಮ್‌ಲೈನ್ ಮಾಡುವುದಕ್ಕಾಗಿ ಈ ತಿದ್ದುಪಡಿಯನ್ನು ನಾವು ತಂದಿದ್ದೇವೆ. We have streamlined the procedure in the interest of the Public, according to which any change of land use should be published in a widely circulated newspaper, objections should be called for from the public, opportunity to the public should be given and they should be heard.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಅಷ್ಟು ಸಿಂಪಲ್ ಬಿಲ್ ಅಲ್ಲ. ಸೆಕ್ಷನ್ಸ್ ೯, ೧೦, ೧೧, ೧೪, ೧೪(ಎ) ಇವುಗಳನ್ನೆಲ್ಲಾ ಪೂರ್ಣವಾಗಿ ನಾವು ಓದಬೇಕಾಗುತ್ತದೆ. ಲ್ಯಾಂಡ್‌ಯೂಸ್‌ನ್ನು ಛೇಂಜ್ ಮಾಡಬೇಕೆಂದು ನೀವು ಏನು ತಿದ್ದುಪಡಿಯನ್ನು ಇಲ್ಲಿ ತಂದಿದ್ದೀರಿ ಇದರ ವ್ಯಾಪ್ತಿಯಲ್ಲಿ ಬೆಂಗಳೂರಿನ ಸುತ್ತಮುತ್ತ ಇರತಕ್ಕ ಅನೇಕ ಹಳ್ಳಿಗಳು ಕವರ್ ಆಗುತ್ತವೆ. ಗ್ರೀನ್ ಬೆಲ್ಟ್ ಏರಿಯಾದಲ್ಲಿ ಜಮೀನನ್ನು ಎನ್.ಆರ್.ಐ.ಗೆ ಸೊಸೈಟೀಸ್‌ಗೆ ಎಂದು ಕೊಡುತ್ತಿದ್ದೀರಿ.

ಅಧ್ಯಕ್ಷರು.—ಮೊದಲು ಅವರು ಮೂವ್ ಮಾಡಲಿ, ಆನಂತರ ನೀವು ಹೇಳುವಿರಂತೆ

ಶ್ರೀ ಆರ್.ವಿ ದೇಶಪಾಂಡೆ.—ನಾನು ಈಗಾಗಲೇ ಮೂವ್ ಮಾಡಿದ್ದೇನೆ.

(ಗೊಂದಲ)

ಅಧ್ಯಕ್ಷರು.—ನೀವು ಹೀಗೆಲ್ಲಾ ಮಾಡುವುದಾದರೆ ನಾನು ಅಜೆಂಡ ಪ್ರಕಾರ ಹೋಗಬೇಕಾಗುತ್ತದೆ

ಶ್ರೀ ಎಸ್ ಬಂಗಾರಪ್ಪ.—ಬಿಸಿನೆಸ್ ಅಡ್ವೈಸರಿ ಕಮಿಟಿಯ ತೀರ್ಮಾನದ ಪ್ರಕಾರ ನೀವು ಅಂದರೆ ಸರ್ಕಾರ ಏತಕ್ಕೆ ನಡೆದುಕೊಳ್ಳುವುದಿಲ್ಲ ?

ಅಧ್ಯಕ್ಷರು.—ಈಗಾಗಲೇ ಬಿಲ್ ಇಂಟ್ರಡ್ಯೂಸ್ ಆಗಿದೆ.

ಶ್ರೀ ಆರ್.ವಿ. ದೇಶಪಾಂಡೆ.—ಮಾರ್ಚ್ ೧೯ನೇ ತಾರೀಖೆ ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ್ದೇನೆ. ನಾವು ಅಜೆಂಡಾ ಪ್ರಕಾರವೇ ಹೋಗುತ್ತಿದ್ದೇವೆ.